# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Phone & Fax: 08182-272672E-mail :
eesmgmwd@gmail.com

ಕಾರ್ಯನಿರ್ವಹಕ ಇಂಜಿನಿಯರ್(ವಿ)
ರವರ ಕಛೇರಿ
ಬೃ.ಕಾ.,ವಿ-1ಕವಿಪ್ರನಿನಿ, ಬಾಲರಾಜ್ ಅರಸ್ ರಸ್ತೆ
ರೈಲ್ವೇ ಸ್ಟೇಷನ್ ಹತ್ತಿರ ಶಿವಮೊಗ್ಗ.

ಕ್ರ.ಸಂ. ಕಾನಿಇಂ(ವಿ)/ಸಕಾನಿಇಂ(ಕ)/ಬೃಕಾಉವಿ-1/ಶಿ/2019-20/ 4582-92 ದಿನಾಂಕ- 1 FEB 2020

ಲಗತ್ತು:-

ಗೆ,
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಸಾಗರ ಅರಣ್ಯ ವಿಭಾಗ,
ಸಾಗರ-577401.

ಮಾನ್ಯರೇ,

ವಿಷಯ:- ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಕುಪ್ಪಗಡ್ಡೆ ಗ್ರಾಮ ಪಂಚಾಯತ್ ಖಾನೇಷುಮಾರಿ ಸರ್ವೆ ನಂ.316 ರಲ್ಲಿ ಕವಿಪ್ರನಿನಿ ಬೃಹತ್ ಕಾಮಗಾರಿ ವಿಭಗದಿಂದ 110ಕೆ.ವಿ ಪ್ರಸರಣ ಮಾರ್ಗ ಮತ್ತು 1x10MVA, 110/11ಕೆವಿ ವಿದ್ಯುತ್ ಉಪ ಕೇಂದ್ರವನ್ನು ನಿರ್ಮಾಣ ಮಾಡಲು 110ಕೆ.ವಿ ಮಾರ್ಗವು ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಆಕ್ಷೇಪಣೆ (ಇ.ಡಿ.ಎಸ್) ವ್ಯಕ್ತಪಡಿಸುವ ಬಗ್ಗೆ.

ಉಲ್ಲೇಖ:- 1)ಅರಣ್ಯ ಪ್ರದೇಶದ ಪ್ರಸ್ತಾಪ ಸಂಖ್ಯೆ:-FP/KA/TRANS/38788/2019
2) ಪ್ರಧಾನ ಮುಖ್ಯ ಅರಣ್ಯಸಂರಕ್ಷಣಾಧಿಕಾರಿ ರವರ ಕಛೇರಿ ಇಮೇಲ್22.05.2019
3) ಈ ಕಛೇರಿ ಪತ್ರ ಸಂಖ್ಯೆ:- 95-100 ದಿನಾಂಕ 06.06.2019
4) ತಮ್ಮ ಕಛೇರಿ ಪತ್ರ ಸಂಖ್ಯೆ:-ಬಿ1/ಭೂಮಿ/ಎಫ್.ಸಿ/ಜಿ.ಎಲ್-1190/2019-20 ದಿನಾಂಕ 07.01.2020.

** ** **

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಕುಪ್ಪಗಡ್ಡೆ ಗ್ರಾಮ ಪಂಚಾಯತ್ ಖಾನೇಷುಮಾರಿ ಸರ್ವೆ ನಂ.316 ರಲ್ಲಿ ಹೊಸದಾಗಿ ನಿರ್ಮಿಸುತ್ತಿರುವ 1x10MVA, 110/11ಕೆವಿ ವಿದ್ಯುತ್ ಉಪ ಕೇಂದ್ರಕ್ಕೆ ಸಂಪರ್ಕವನ್ನು ಕಲ್ಪಿಸಲು ಹಾಲಿ ಇರುವ 110/11ಕೆವಿ ತೋಗರ್ಸಿ ವಿದ್ಯುತ್ ಉಪ ಕೇಂದ್ರದಿಂದ ಕನಕೊಪ್ಪ, ಚಿಕ್ಕಬ್ಬೂರ್, ಗುಡುಗಿನಕೊಪ್ಪ, ಬಿದರಗೆರೆ, ಕುಮ್ರಿ ಗ್ರಾಮಗಳ ಸರಹದ್ದಿನ ಮುಖಾಂತರ ಹಾದು ಹೋಗಿ ಉದ್ದೇಶಿತ ಕುಪ್ಪಗಡ್ಡೆ 1x10MVA, 110/11 ಕೆವಿ ವಿದ್ಯುತ್ ಉಪ ಕೇಂದ್ರಕ್ಕೆ ಸಂಪರ್ಕಿಸಲು ಉದ್ದೇಶಿಸಿದೆ.

ಮುಂದುವರಿದು ಉದ್ದೇಶಿತ ಕಾಮಗಾರಿಗೆ 11.648 ಕಿ.ಮೀ ಉದ್ದದ ಸಂಪರ್ಕ ಕಲ್ಪಿಸುವ 110 ಕೆವಿ ಮಾರ್ಗವನ್ನು 22 ಮೀ ಅಗಲ ಅನ್ವಯಿಸುವಂತೆ ಆಧುನಿಕ ವಿವರವಾದ ಸಮೀಕ್ಷೆ ಕೈಗೊಂಡಿದ್ದು, ಸದರಿಯವರ ವರದಿಯ ಪ್ರಕಾರ ಸರ್ವೆ ನಂ.40, 164 ಮತ್ತು 103 ನಲ್ಲಿ ಸುಮಾರು 2760.58 ಮೀ ಉದ್ದದ 6.073276 ಹೆಕ್ಟರ್ ನಷ್ಟು ಅರಣ್ಯ ಪ್ರದೇಶದಲ್ಲಿ ಉದ್ದೇಶಿತ ದ್ವಿಮುಖ ಗೋಪುರದ ಮೇಲೆ ಏಕ ಮುಖ 110 ಕೆವಿ ಮಾರ್ಗದ ರಚನೆ ಹಾದು ಹೋಗುವುದರಿಂದ ಉಲ್ಲೇಖ ಸಂಖ್ಯೆ 1 ರಲ್ಲಿ ಆನ್ ಲೈನ್ ತಂತ್ರಾಂಶದಲ್ಲಿ 6.073276 ಹೆಕ್ಟರ್ ಅರಣ್ಯ ಪ್ರದೇಶ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯ ಪರಿಶೀಲನೆಯ ನಂತರ ಉಲ್ಲೇಖ ಸಂಖ್ಯೆ 2ರ ದಿನಾಂಕ 22.05.2019ದ ಇಮೇಲ್ ನಲ್ಲಿ ತಿಳಿಸರುವಂತೆ ಸದರಿ ಪ್ರಸ್ತಾವನೆಯ ಹಾರ್ಡ್ ಕಾಪೀ ಯನ್ನು ತಮ್ಮ ಕಛೇರಿಯ ಪರಿಶೀಲನೆಗೆ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ತಿಳಿಸಿದನ್ವಯ ಉಲ್ಲೇಖಿತ ಪತ್ರ ಸಂಖ್ಯೆ 3 ರಲ್ಲಿ ಸಲ್ಲಿಸಲಾಗಿರುತ್ತದೆ.

ಉಲ್ಲೇಖಿತ ಪತ್ರ ಸಂಖ್ಯೆ 4 ರಲ್ಲಿ ತಮ್ಮ ಕಛೇರಿಯಿಂದ ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಪರಿಹಾರಾತ್ಮಕ ನೆಡುತೋಪಿನ ಬಗ್ಗೆ ಯಾವುದೇ ಮಾಹಿತಿ ಒದಗಿಸಿರುವುದಿಲ್ಲ ಆದ್ದರಿಂದ ಅವುಗಳ ಬಗ್ಗೆ ಮಾಹಿತಿ ಒದಗಿಸುವುದು ಹಾಗೂ ಸದರಿ ಯೋಜನೆಗೆ ಬಿಡುಗಡೆಗೊಳ್ಳುವ 6.073 ಹೆಕ್ಟರ್ ಅರಣ್ಯ ಪ್ರದೇಶದ ಬದಲಾಗಿ ಎರಡುಪಟ್ಟು ಅರಣ್ಯೇತರ ಪ್ರದೇಶ ಅಂದರೆ 12.146 ಹೆಕ್ಟರ್ ಅರಣ್ಯೇತರ ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಬೇಕಿದ್ದು, ಸದರಿ ಪ್ರದೇಶದ ಬಗ್ಗೆ ಉಪಯೋಗಿ ಸಂಸ್ಥೆಯು ದಾಖಲೆ ನೀಡಬೇಕಿರುತ್ತದೆ ಎಂದು ತಿಳಿಸಿರುತ್ತೀರಿ, ಆದರೆ ಪ್ರಧಾನ ಮುಖ್ಯ ಅರಣ್ಯಸಂರಕ್ಷಣಾಧಿಕಾರಿ ರವರ ಕಛೇರಿ ಪತ್ರ ಸಂಖ್ಯೆ A5(3),GFL.CR.3/2018-19 dated 05.12.2018 ಕ್ರಮ ಸಂಖ್ಯೆ "L" ನಲ್ಲಿ **" While the FC proposals involving only the Transmission lines in forest area are exempted from providing equivalent non-forest land and compensatory Afforestation can be raised in twice the**

Scanned by CamScanner

degraded forest land, the sub-stations if located in forest land do not enjoy such exemption" ಎಂದು ತಿಳಿಸಿರುತ್ತಾರೆ. ಆದುದರಿಂದ ಸದರಿ ಕಾಮಗಾರಿಯಲ್ಲಿ 110ಕೆ.ವಿ ವಿದ್ಯುತ್ ಮಾರ್ಗ ಮಾತ್ರ ಅರಣ್ಯ ಪ್ರದೇಶದಲ್ಲಿ ಹಾದು ಹೋಗುವುದರಿಂದ ತಾವೂ ತಿಳಿಸಿರುವಂತೆ ಸದರಿ ಪ್ರದೇಶದ ಬಗ್ಗೆ ಉಪಯೋಗಿ ಸಂಸ್ಥೆಯು ಪರಿಹಾರಾತ್ಮಕ ನೆಡುತೋಪು ಬೆಳೆಸುವ ದಾಖಲೆಗಳನ್ನು ನೀಡುವ ಅವಶ್ಯಕತೆ ಕಂಡುಬರುವುದಿಲ್ಲ. ಇದನ್ನು ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ

ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಬೃ.ಕಾ.ವಿ. ಕ.ವಿ.ಪ್ರ.ನಿ.ನಿ, ಶಿವಮೊಗ್ಗ.

Scanned by CamScanner